## ಕರ್ನಾಟಕ ಸರ್ಕಾರದ ನಡವಳಿ

ವಿಷಯ : ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಸಭಾ ಭತ್ಯೆ, ದಿನಭತ್ಯೆ, ಪ್ರಯಾಣ ಭತ್ಯೆ ಹಾಗೂ ಸಾದಿಲ್ವಾರು ವೆಚ್ಚಗಳ ಒಟ್ಟು ಮೊತ್ತ ರೂ. 14,860/- ಗಳನ್ನು ಪಾವತಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 690 ಗ್ರಾಪಂಅ 2015 ದಿನಾಂಕ: 05-04-2017.
2. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 690 ಗ್ರಾಪಂಅ 2015 ದಿನಾಂಕ: 12-10-2017.
3. ಸಮನ್ವಯ ಅಧಿಕಾರಿ, ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ ಹಾಗೂ ಸಹಾಯಕ ನಿರ್ದೇಶಕರು ರವರ ಪತ್ರ ಸಂಖ್ಯೆ:ಇ-ಸ್ವತ್ತು / ಸುಸಸ/ 55/2017-18 ದಿನಾಂಕ:06-02-2018.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1) ಮತ್ತು (2) ರ ಸರ್ಕಾರದ ಆದೇಶದಲ್ಲಿ ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ಆಗುತ್ತಿರುವ ತೊಂದರೆ, ಮೋಸ ಹಾಗೂ ಅನಾನುಕೂಲತೆಗಳ ಕುರಿತು ಬಂದಿರುವ ದೂರುಗಳ ಹಿನ್ನೆಲೆಯಲ್ಲಿ, ನಿವೃತ್ತ ಭಾರತೀಯ ಆಡಳಿತ ಸೇವೆ (ಐ.ಎ.ಎಸ್.,) ಅಧಿಕಾರಿಯಾದ ಶ್ರೀ ಕೆ.ಹೆಚ್. ಗೋಪಾಲಕೃಷ್ಣೇಗೌಡ ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಸಮನ್ವಯ ಅಧಿಕಾರಿ, ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ ಹಾಗೂ ಸಹಾಯಕ ನಿರ್ದೇಶಕರು ರವರ ಪತ್ರದಲ್ಲಿ ಜನವರಿ 2018 ಕ್ಕೆ ಸಂಬಂಧಿಸಿದ ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಸಭಾ ಭತ್ಯೆ, ದಿನಭತ್ಯೆ, ಪ್ರಯಾಣ ಭತ್ಯೆ ಹಾಗೂ ಸಾದಿಲ್ವಾರು ವೆಚ್ಚಗಳ ಒಟ್ಟು ಮೊತ್ತ ರೂ. 14,860/- ಗಳನ್ನು ಪಾವತಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದಲ್ಲಿ ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿಗೆ ತಗಲುವ ವೆಚ್ಚವನ್ನು ಕರ್ನಾಟಕ ಪಂಚಾಯತ್ ರಾಜ್ ಅನುದಾನದಿಂದ ಭರಿಸಲು ತಿಳಿಸಲಾಗಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 690 ಗ್ರಾಪಂಅ 2015 (ಭಾಗ-1) ಬೆಂಗಳೂರು, ದಿನಾಂಕ: 17-03-2018.**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಜನವರಿ 2018 ರ ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಸಭಾ ಭತ್ಯೆ ದಿನಭತ್ಯೆ, ಪ್ರಯಾಣ ಭತ್ಯೆ ಹಾಗೂ ಸಾದಿಲ್ವಾರು ವೆಚ್ಚಗಳ ಒಟ್ಟು ಮೊತ್ತ ರೂ. 14,860/- ಗಳನ್ನು (ರೂಪಾಯಿ ಹದಿನಾಲ್ಕು ಸಾವಿರದ ಎಂಟು ನೂರ ಅರವತ್ತುಗಳು ಮಾತ್ರ) ಕರ್ನಾಟಕ ಪಂಚಾಯತ್ ರಾಜ್ ಅನುದಾನ, ಲೆಕ್ಕಶೀರ್ಷಿಕೆ 2515-00-101-0-09-103ರ ಅಡಿ ವೆಚ್ಚ ಭರಿಸಿ ಈ ಕೆಳಕಂಡಂತೆ ಪಾವತಿಸಲು ಆದೇಶಿಸಿದೆ.

| ಕ್ರ.ಸಂ. | ಹೆಸರು ಮತ್ತು ಪದನಾಮ | ಸಭಾ ಭತ್ಯೆ | ಪ್ರಯಾಣ ಭತ್ಯೆ /ದಿನಭತ್ಯೆ | ಒಟ್ಟು ಮೊತ್ತ | ಪಾವತಿಸಬೇಕಾಗಿರುವ ಮೊತ್ತ |
|---|---|---|---|---|---|
| 1 | ಶ್ರೀ ಕೆ.ಹೆಚ್. ಗೋಪಾಲಕೃಷ್ಣೇಗೌಡ, ಅಧ್ಯಕ್ಷರು | 1,500/- | - | 1,500/- | 1,500/- |
| 2 | ಶ್ರೀ ಕೆ. ಸುಬ್ರಾಯ್ ಕಾಮತ್, ಸದಸ್ಯರು | 1,500/- | 2,000/- | 3,500/- | 3,500/- |
| 3 | ಶ್ರೀ ಎಸ್.ಎಸ್. ಕಟಗೇರಿ, ಸದಸ್ಯರು | 1,500/- | 1,872/- | 3,372/- | 3,372/- |

| | | | | | |
|---|---|---|---|---|---|
| 4 | ಸಾದಿಲ್ವಾರ್ ವೆಚ್ಚ ಸಮಿತಿಯ ಪರವಾಗಿ ಶ್ರೀ ರಮೇಶ್ ಡಿ.ಓ, ಸಮನ್ವಯ ಅಧಿಕಾರಿಯವರ ಹೆಸರಿಗೆ ನೀಡುವುದು | – | – | 6488/- | 6488/- |
| | ಒಟ್ಟು ಮೊತ್ತ | | | | 14,860/- |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

17/7

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3. ನಿರ್ದೇಶಕರು (ಪಂ.ರಾಜ್-2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
4. ಸರ್ಕಾರದ ಅಧೀನ ಕಾರ್ಯದರ್ಶಿ, (ಜಿ.ಪಂ.) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
5. ಶ್ರೀ ಕೆ.ಹೆಚ್. ಗೋಪಾಲಕೃಷ್ಣೇಗೌಡ, ಭಾ.ಆ.ಸೇ., (ನಿವೃತ್ತ), ನಂ.5, ಕೃಷ್ಣಾ ಸ್ಮಿತ, 2ನೇ ಮುಖ್ಯ ರಸ್ತೆ, ಡೋಲ್ಲರ್ ಲೇ ಔಟ್, ಜೆ.ಪಿ. ನಗರ, 4ನೇ ಹಂತ, ಬೆಂಗಳೂರು-560078.
6. ಶ್ರೀ ಕೆ. ಸುಬ್ರಾಯ್ ಕಾಮತ್, ಕ.ಆ.ಸೇ., (ನಿವೃತ್ತ) ನಂ. 7/433, 5ನೇ ಕ್ರಾಸ್, ಬಸವನಗುಡಿ, ಶಿವಮೊಗ್ಗ.
7. ಶ್ರೀ ಎಸ್.ಎಸ್. ಕಟಗೇರಿ, (ನಿವೃತ್ತ) ನಂ. ಎಂಎಫ್-12/2, ಎಲ್ ಬ್ಲಾಕ್, ಸರ್ಕುಲಾರ್ ರಸ್ತೆ, ನಂದಿನಿ ಲೇ ಔಟ್, ಬೆಂಗಳೂರು-560096.
8. ಶ್ರೀ ರಮೇಶ್, ಡಿ.ಓ. ಸಮನ್ವಯ ಅಧಿಕಾರಿ, ಇ-ಸ್ವತ್ತು ಸುಧಾರಣಾ ಸಲಹಾ ಸಮಿತಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತಿ, 2ನೇ ಮಹಡಿ, ಎಸ್.ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು-70.

ಪ್ರತಿಗಳು:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.